ನೀರು ಬಿಡುವುದು ಕರ್ನಾಟಕದ ಕೊಡಗಿನಲ್ಲಿ ಹೆಚ್ಚು ಮಳೆಯಾದಾಗ. ಆದರೆ ಹೆಚ್ಚು ಹಾನಿಯಾಗುವುದು ಅಲ್ಲಿಗೆ. ಇವತ್ತು 16 ಕೋಟಿ ರೂ ಕೇಳಿದ್ದಾರೆ. ಆದರೆ ನೀವು ಒಂದು ಮತ್ತೆ ಎರಡು ಕೋಟಿ ರೂ ಅಂದರೆ ಹೇಗೆ ಕಳೆದ ಬಾರಿ ಕೂಡ ಮಳೆಯಾದ ಸಂದರ್ಭದಲ್ಲಿ ವಿಶೇಷಾಧಿಕಾರಿಯನ್ನು ಕಳುಹಿಸಿದ್ದೀರಿ. ಅವರು ಬಂದರು ಹೋದರು, ಆದರೆ ಹಣ ಬಿಡುಗಡೆ ಆಗಲಿಲ್ಲ. ದಯವಿಟ್ಟು ಈ ವಿಚಾರದಲ್ಲಿ ಸಮಗ್ರ ಮಾಹಿತಿ ತರಿಸಿಕೊಳ್ಳಿ, ಏನು ಹಾನಿಯಾಗಿದೆ. ಜಿಲ್ಲಾಧಿಕಾರಿಗಳು ಏನು ಕರಾರುವಾಕ್ ವರದಿ ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಹಣ ಬಿಡುಗಡೆ ಮಾಡಬೇಕಾಗಿದೆ. ಮೊದಲು ಕೊಡಗಿಗೆ ಒಬ್ಬ ವಿಶೇಷಾಧಿಕಾರಿಯನ್ನು ಕಳುಹಿಸಿಕೊಡಿ. ಅವರು ಪರಾಮರ್ಶೆ ಮಾಡಲಿ. ಇವತ್ತು ಮಳೆಯಿಂದ ರಸ್ತೆಗಳು ಹಾನಿಯಾಗಿವೆ ಬೆಳೆ ಹಾನಿಯಾಗಿದೆ ಮನೆಗಳ ಕುಸಿತವಾಗಿದೆ ಜನಜೀವನಕ್ಕೆ ತುಂಬಾ ಧಕ್ಕೆಯಾಗಿದೆ. ಇವತ್ತು ಕಾಡಿನಲ್ಲಿ ವಾಸ ಮಾಡುವ ಗಿರಿಜನರು, ಸುಮಾರು 10 ದಿವಸದಿಂದ ಹೊರಗಡೆ ಬಂದಿಲ್ಲ, ಸತತ ಮಳೆಯ ಕಾರಣ ಅವರು ಹೊರನಗೆ ಬರದಿರುವುದರಿಂದ ಅವರ ಬಾಳು ಹೇಳಲು ಅಸಾಧ್ಯ. ಒಬ್ಬ ಅಧಿಕಾರಿಯು ಇಂತಹ ಗಿರಿಜನರ ಮನೆಗಳಿಗೆ ಹೋಗಿ ನಿಮ್ಮ ಕಷ್ಟವೇನು ಅಂತ ವಿಚಾರಿಸಿಲ್ಲ. ಅವರಿಗೆ ಆಹಾರಧಾನ್ಯ ಒದಗಿಸುವ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮೂಲಕ ಕೇಳಿಕೊಂಡಿದ್ದೇನೆ. ಆದರೆ ಯಾರೊಬ್ಬರೂ ಅವರನ್ನು ಸಂಪರ್ಕ ಮಾಡಿಲ್ಲ. ಹತ್ತು ದಿವಸಗಳಿಂದ ಅವರು ಯಾವ ತರಹ ಜೀವನ ಮಾಡುತ್ತಿದ್ದಾರೆ ಎಂಬುದನ್ನು ತಾವು ಪರಿಶೀಲಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಒಬ್ಬ ವಿಶೇಷಾಧಿಕಾರಿಯನ್ನು ಕೊಡಗು ಜಿಲ್ಲೆಗೆ ಕಳುಹಿಸಿಕೊಡಿ. ಮತ್ತೆ ಕಾಡಿನಲ್ಲಿರುವ ಗಿರಿಜನರಿಗೆ ಆಹಾರ ಒದಗಿಸಲು ಕ್ರಮ ಕೈಗೊಳ್ಳಿ. ಎಷ್ಟು ಮನೆಗಳು ಕುಸಿದಿವೆಯೋ ಅಷ್ಟೂ ಮನೆಗಳನ್ನು ಕಟ್ಟಿಸಿಕೊಡಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿ ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

4. ಸಭೆಯ ಮುಂದಿಡಲಾದ ಕಾಗದಪತ್ರಗಳು

ಅ) ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005 ನೇ ಸಾಲಿನ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕ

ಕಾರ್ಯದರ್ಶಿ, ವಿಧಾನಸಭೆ : ಅಧ್ಯಕ್ಷರೇ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

ಆ) ಹತ್ತನೇ ಪಟ್ಟಿಯಲ್ಲಿನ ಕಾಗದಪತ್ರಗಳು

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) :

1. ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು) ಅವರ ಪರವಾಗಿ) : ಮಾನ್ಯ ಅಧ್ಯಕ್ಷರೇ,

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ ಕಲಂ 15 (3) ರ ಪ್ರಕರಣದ ಮೇರೆಗೆ:

ಛತ್ರಿಯ ಮೇಲೆ ವಿಶೇಷ ಪ್ರವೇಶ ತೆರಿಗೆಯನ್ನು ವಿಧಿಸಿ ದಿನಾಂಕ : 11-7-2005 ರಂದು ಹೊರಡಿಸಲಾದ ಎಫ್‌ಡಿ:29:ಸಿಇಟಿ:2005ನೇ ಸಂಖ್ಯೆಯ ಅಧಿಸೂಚನೆ.

2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

1) ಮಿಠಾಯಿಗಾರರನ್ನು ಹೊರತುಪಡಿಸಿ ಸಿಹಿ ಪದಾರ್ಥಗಳನ್ನೊಳಗೊಂಡಂತೆ ಬೇಕರಿ ಪದಾರ್ಥಗಳನ್ನು ಮಾರಾಟ ಮಾಡುವ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ಶೇ. 4ಕ್ಕೆ ನಿಗಧಿಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ: 5–7–2005ರಂದು ಹೊರಡಿಸಲಾದ ಎಫ್‌ಡಿ:169: ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆ.

2) ದಿನಾಂಕ : 18–4–2005ರ ಎಫ್‌ಡಿ:56:ಸಿ.ಎಸ್‌ಎಲ್:2005(1)ಕ್ಕೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ : 8–7–2005ರಂದು ಹೊರಡಿಸಲಾದ ಎಫ್‌ಡಿ:348 ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆ.

3) ದಿನಾಂಕ: 18–4–2005ರ ಎಫ್‌ಡಿ 56 :ಸಿಎಸ್‌ಎಲ್:2005(2) ಕ್ಕೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ: 8–7–2005ರಂದು ಹೊರಡಿಸಲಾದ ಎಫ್‌ಡಿ:348:ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆ.

4) ದಿನಾಂಕ: 18–4–2005ರ ಎಫ್‌ಡಿ 56 ಸಿಎಸ್‌ಎಲ್:2005(3) ಕ್ಕೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ: 8–7–2005ರಂದು ಹೊರಡಿಸಲಾದ ಎಫ್‌ಡಿ:348:ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

. ಶ್ರೀ ಆರ್. ರಾಮಲಿಂಗ ರೆಡ್ಡಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, 1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅನುಸೂಚಿ–2ಕ್ಕೆ ತಿದ್ದುಪಡಿ ಮಾಡಿ ಶಿಕ್ಷಣ ಇಲಾಖೆಯ ವಿವಿಧ ಸಂಸ್ಥೆಗಳ ಕಾರ್ಯ ಹಂಚಿಕೆ ಕುರಿತು ದಿನಾಂಕ: 3–6–2005ರಂದು ಹೊರಡಿಸಲಾದ ಡಿಪಿಎಆರ್:12:ಎಸ್‌ಡಿಇ:2004ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಮಂಡಿಸಲಾಯಿತು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ರಾಜ್ಯದ ವಿವಿಧ ಪ್ರದೇಶಗಳಲ್ಲಿ ಅಧಿಕ ಮಳೆಯಿಂದ ಜಲಾವೃತಗೊಂಡಿರುವ ಹಳ್ಳಿಗಳಲ್ಲಿ ಮನೆ, ಬೆಳೆಹಾನಿ ಇತ್ಯಾದಿ ತೊಂದರೆ ಉಂಟಾಗಿರುವ ಬಗ್ಗೆ.

(ಗೊಂದಲ)

ಉಪಾಧ್ಯಾಕ್ಷರು : ಅವರು ಎರಡು ನಿಮಿಷದಲ್ಲಿ ಮುಗಿಸುತ್ತಾರೆ. ನೀವು ಕುಳಿತುಕೊಳ್ಳಿ. ಸುಮ್ಮನೆ ಟೈಮ್ ವೇಸ್ಟ್ ಮಾಡಬೇಡಿ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ (ಮುಧೋಳ್) : ಮಾನ್ಯ ಉಪಾಧ್ಯಕ್ಷರೇ, ನನ್ನ ಮತಕ್ಷೇತ್ರದ ಮುಧೋಳ್ ತಾಲ್ಲೂಕಿನಲ್ಲಿ ಘಟಪ್ರಭಾ ನದಿಗೆ ಪ್ರವಾಹ ಬಂದು ಸುಮಾರು ಐದು ಹಳ್ಳಿಗಳು ಇವತ್ತು ಜಲಾವೃತವಾಗಿವೆ. ನಡುಗಡೆಯಾಗಿಬಿಟ್ಟಿದೆ. ಜನಜೀವನ ಅಸ್ತವ್ಯಸ್ತವಾಗಿದೆ. ಆಸ್ತಿಪಾಸ್ತಿ ಹಾಳಾಗಿದೆ. ಮತ್ತು ಜನರ ಪ್ರಾಣ ಕೂಡ ಇವತ್ತು ಅಪಾಯದಲ್ಲಿದೆ. ಈ ಸಂದರ್ಭದಲ್ಲಿ ಸರ್ಕಾರ ಮುನ್ನೆಚ್ಚರಿಕೆಯ ಕ್ರಮವಾಗಿ ಏನು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲವೆಂದು ನಾನು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು ಇದು ಮೊದಲನೇ ಸಲ ಅಲ್ಲ. ಘಟಪ್ರಭಾನದಿಗೆ ಪ್ರವಾಹ ಬರತಕ್ಕಂಥದ್ದು. ಹಿಂದೆಯೂ ಕೂಡ ಸಾಕಷ್ಟು